# ಹದಿನಾರು ಸಂಸ್ಕಾರಗಳು

## ಮನೋಗತ

ಮನುಷ್ಯನ ಜನ್ಮವು ಕೇವಲ ಈಶ್ವರಪ್ರಾಪ್ತಿಗಾಗಿಯೇ ಇದೆ ಎಂದು ಧರ್ಮದ ಬೋಧನೆಯಾಗಿದೆ. ಆದುದರಿಂದ ಜನ್ಮದಿಂದ ಮೃತ್ಯುವಿನವರೆಗೆ ಘಟಿಸುವ ಎಲ್ಲ ಪ್ರಸಂಗಗಳಿಂದಲೂ ಈಶ್ವರನ ಸಮೀಪ ಹೋಗಲು ಬರಬೇಕೆಂದು ಅವಶ್ಯಕವಾದ ಉಪಾಸನೆಗಳನ್ನು ಧರ್ಮಶಾಸ್ತ್ರದಲ್ಲಿ ಹೇಳಲಾಗಿದೆ. ಜನ್ಮದಿಂದ ವಿವಾಹದವರೆಗೆ ಜೀವನದ ಒಂದು ಚಕ್ರವು ಪೂರ್ಣವಾಗುತ್ತದೆ. ಹೀಗೆಯೇ ಇನ್ನೊಂದು ಚಕ್ರವು ಪುತ್ರನ / ಕನ್ಯೆಯ ಜನ್ಮದಿಂದ ಅವನ / ಅವಳ ವಿವಾಹದವರೆಗೂ ಇರುತ್ತದೆ. ಹೀಗೆ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಯವರೆಗೆ ನಡೆಯುತ್ತಲೇ ಇರುತ್ತದೆ. ಗರ್ಭಧಾರಣೆಯಿಂದ ವಿವಾಹದವರೆಗಿನ ಕಾಲದಲ್ಲಿ ಜೀವನದಲ್ಲಿ ಘಟಿಸುವ ಪ್ರಮುಖ ಹದಿನಾರು ಪ್ರಸಂಗಗಳಲ್ಲಿ ಈಶ್ವರನ ಸಮೀಪಕ್ಕೆ ಹೋಗಲು ಯಾವ ಸಂಸ್ಕಾರಗಳನ್ನು ಮಾಡಬೇಕು ಎಂಬ ಮಾಹಿತಿಯನ್ನು ಈ ಗ್ರಂಥದಲ್ಲಿ ನೀಡಲಾಗಿದೆ. ಈ ಸಂಸ್ಕಾರಗಳಿಂದ ಮುಂದೆ ಉಪಾಸನೆಯು ಒಳ್ಳೆಯ ರೀತಿಯಲ್ಲಿ ಆಗಲು ಸಹಾಯವಾಗುತ್ತದೆ. ಸಂಸ್ಕಾರಗಳ ಮಾಹಿತಿಯನ್ನು ಗ್ರಂಥದ ಕೊನೆಯಲ್ಲಿ ನೀಡಲಾಗಿರುವ ಆಧಾರಗ್ರಂಥಗಳಿಂದ ತೆಗೆದುಕೊಳ್ಳಲಾಗಿದೆ. ಈ ಗ್ರಂಥದಲ್ಲಿ ಸಂಸ್ಕಾರದ ಅಂತರ್ಗತ ಬರುವ ವಿಧಿಗಳಲ್ಲಿ ಪ್ರತಿಯೊಂದು ಕೃತಿಯನ್ನು ಹೇಗೆ ಮಾಡಬೇಕು ಎಂಬುದರ ಬಗ್ಗೆ ಚರ್ಚಿಸದೇ, ಯಾವುದಾದರೊಂದು ಕೃತಿಯನ್ನು ಇಂತಹ ಒಂದು ಪದ್ಧತಿಯಿಂದ ಏಕೆ ಮಾಡಬೇಕು ಮತ್ತು ಅದರ ಹಿಂದಿನ ಅಧ್ಯಾತ್ಮಶಾಸ್ತ್ರೀಯ ಕಾರಣಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಇದರಿಂದ ಸಂಸ್ಕಾರಗಳ ಹಿಂದಿನ ಶಾಸ್ತ್ರವು ತಿಳಿಯಲು ಸಹಾಯವಾಗುವುದು. ವರ್ಣ, ಜಾತಿ, ಉಪಜಾತಿ ಇತ್ಯಾದಿಗಳ ಸಂಸ್ಕಾರಗಳಲ್ಲಿನ ವಿಧಿಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದ್ದರೂ ವಿಧಿಗಳ ಹಿಂದಿನ ಶಾಸ್ತ್ರವನ್ನು ತಿಳಿದುಕೊಳ್ಳಲು ಅಡಚಣೆ ಬರುವುದಿಲ್ಲ. ಕೆಲವರು ಮೃತ್ಯುನಂತರ ಮಾಡುವ ಸಂಸ್ಕಾರಗಳನ್ನು ಸಹ ಈ ಹದಿನಾರು ಸಂಸ್ಕಾರಗಳಲ್ಲಿಯೇ ಸೇರಿಸುತ್ತಾರೆ. ಆ ಸಂಸ್ಕಾರಗಳ ಮಾಹಿತಿಯನ್ನು 'ಮೃತ್ಯುನಂತರದ ಕ್ರಿಯಾಕರ್ಮಗಳ ಶಾಸ್ತ್ರ' ಎಂಬ ಕಿರುಗ್ರಂಥದಲ್ಲಿ ನೀಡಲಾಗಿದೆ.

ಇತ್ತೀಚಿನ ಬುದ್ಧಿಜೀವಿಗಳ ಕಾಲದಲ್ಲಿಯೂ ಎಲ್ಲರೂ ಸಂಸ್ಕಾರ ಹಾಗೂ ವಿಧಿಗಳ ಹಿಂದಿನ ಶಾಸ್ತ್ರವನ್ನು ತಿಳಿದುಕೊಂಡು ಅದರಂತೆ ಆಚರಿಸಿ ಹೆಚ್ಚೆಚ್ಚು ಈಶ್ವರನ ಸಮೀಪ ಹೋಗಲು ಪ್ರಯತ್ನ ಮಾಡಬೇಕೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ.

**- ಸಂಕಲನಕಾರರು**

'ನಿಷ್ಠೆ, ತ್ಯಾಗ, ಸೇವೆ ಮತ್ತು ಸದಾಚಾರಗಳಿಂದಾಗಿ 'ಸನಾತನ ಸಂಸ್ಥೆ'ಯು ವ್ಯಾಪಕ ರೂಪವನ್ನು ತಾಳುವುದು ಖಚಿತ.' **- ಪ.ಪೂ. ರಾಮಾನಂದ ಮಹಾರಾಜರು, ಇಂದೂರ್, ಮಧ್ಯಪ್ರದೇಶ.** (೨೧.೫.೨೦೦೮)

## ಅನುಕ್ರಮಣಿಕೆ


೧. ವ್ಯುತ್ಪತ್ತಿ ಮತ್ತು ಅರ್ಥ ೧೧

೨. ಮಹತ್ವ ೧೨

೩. ಅಧಿಕಾರ (ಯಾರಿಗೆ ಸಂಸ್ಕಾರಗಳನ್ನು ಮಾಡುತ್ತಾರೆ ?) ೧೫

೪. ವಿಧಾನ ೧೬

೫. ಆಧಾರವಿಧಿಗಳು ೧೮

೬. ಸಂಸ್ಕಾರಗಳು ೨೫

೬.೧. ಗರ್ಭಾಧಾನ (ಋತುಶಾಂತಿ) ೨೫

೬.೨. ಪುಂಸವನ (ಪುತ್ರಪ್ರಾಪ್ತಿ) ೨೯

೬.೩. ಸೀಮಂತೋನ್ನಯನ ೩೧

೬.೪. ಜಾತಕರ್ಮ (ಜನ್ಮವಿಧಿ) ೩೨

೬.೫. ನಾಮಕರಣ ೩೩

೬.೬. ನಿರ್ಗಮನ (ಮನೆಯಿಂದಾಚೆ ಕರೆದುಕೊಂಡು ಹೋಗುವುದು) ೩೯

೬.೭. ಅನ್ನಪ್ರಾಶನ ೪೦

೬.೮. ಚೌಲಕರ್ಮ (ಚೂಡಾಕರ್ಮ, ಜುಟ್ಟು ಇಡುವುದು) ೪೧

೬.೯. ಉಪನಯನ (ವ್ರತಬಂಧ, ಮುಂಜಿ) ೪೨

೬.೧೦. ಮೇಧಾಜನನ ೫೬

೬.೧೧. ಮಹಾನಾಮ್ನೀವ್ರತ ೫೭

೬.೧೨. ಮಹಾವ್ರತ ೫೭

೬.೧೩. ಉಪನಿಷದ್‌ವ್ರತ ೫೮

೬.೧೪. ಗೋದಾನವ್ರತ (ಕೇಶಾಂತ ಸಂಸ್ಕಾರ) ೫೮

೬.೧೫. ಸಮಾವರ್ತನ ೫೯

೬.೧೬. ವಿವಾಹ ೬೦

卐 ಕೆಲವು ಸಾಂದರ್ಭಿಕ ಅಂಶಗಳು ೭೮

卐 ‘ವಿವಾಹಸಂಸ್ಕಾರ’ಗಳಿಗೆ ಸಂಬಂಧಿಸಿದ ಟೀಕೆ ಅಥವಾ ಅಯೋಗ್ಯ ವಿಚಾರ ಮತ್ತು ಅವುಗಳ ಖಂಡನೆ ೮೦

卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೮೪